ಖಾಸಗಿಯವರಿಗೆ ಸೇರಿದ್ದು

1) ದಯಾನಂದ ಕಾಲೋನಿ ನಾಗಶೆಟ್ಟಿ ಕೊಪ್ಪ
2) ಮಿಷನ್ ಕಾಂಪೌಂಡ್
3) ಕಲಬುರ್ಗಿ ಮಠ್
4) ಸೆಟಲಮೆಂಟ್, ಕ್ರಿಸ್ಚಿಯನ್ ಕಾಲೋನಿ
5) ತೊರವಿಹಕ್ಕಲ್
6) ಮೈಲಾರು ಲಿಂಗದ ಗುಡ್ಡ
7) ಕೆ.ಯು.ಡಿ. ಹತ್ತಿರ
8) ಬೆಳಗಾಂ ರೋಡ್ (ಹಿಂದೂ)
9) ಯಾದವಾಡ್ ರೋಡ್
10) ಕಮಲಾಪುರ ರಸ್ತೆ
12) ಕಲಘಟಗಿ ರಸ್ತೆ
13) ಮಹಿಷಿ ರಸ್ತೆ
14) ಕಲಗೇರಿ ರಸ್ತೆ

ಆ) ನಗರಪಾಲಿಕೆಗೆ ಸೇರಿದ್ದ 12 ಸ್ಮಶಾನಗಳ ಪೈಕಿ ಕೃಷ್ಣಾಪುರ ಸ್ಮಶಾನದಲ್ಲಿ ವಿದ್ಯುತ್ ಚಿತಾಗಾರ ಹಾಗೂ ಶೆಲ್ಟರ್ ಶೆಡ್ಡನ್ನು ಮಾಡಲಾಗಿದೆ. ಹಾಗೂ ನೀರು ಸರಬರಾಜು ಮತ್ತು ಸ್ಮಶಾನಗಳಿಗೆ ತಂತಿಬೇಲಿ ಹಾಕುವ ಕಾರ್ಯ ಮುಗಿದಿದೆ. ಅಲ್ಲದೆ, ಮೂರು ಸ್ಮಶಾನಗಳಲ್ಲಿ ಕಾವಲುಗಾರರನ್ನು ನಿಲ್ಲಿಸಲಾಗಿದೆ.

ಇ) ಬಂದಿದೆ.

ಜನಸಂಖ್ಯೆ ಹೆಚ್ಚಳದಿಂದಾಗಿ ಬೇಡಿಕೆಯ ಅನುಗುಣವಾಗಿ ಮೂರು ಪ್ರದೇಶಗಳನ್ನು ಸ್ಮಶಾನ ಪ್ರದೇಶಗಳನ್ನಾಗಿ ಪರಿವರ್ತಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

1) ಬ್ರಹ್ಮಾಪುರ (2) ಉಣಕಲ್ (3) ಗೋಕುಲ

ಹುಬ್ಬಳ್ಳಿ- ಧಾರವಾಡ ಮಹಾನಗರದಲ್ಲಿ ಲಾಲಬಾಗ್ ಮತ್ತು ಮಕ್ಕಳ ವನ ನಿರ್ಮಾಣ.

485 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಹುಬ್ಬಳ್ಳಿ -ಧಾರವಾಡ ಮಹಾನಗರದಲ್ಲಿ ಲಾಲ್‌ಬಾಗ್ ಮತ್ತು ಮಕ್ಕಳ ವನ ನಿರ್ಮಿಸುವ ವಿಷಯ ಸರ್ಕಾರದವರ ಮಂದಿದೆಯೇ?

ಆ) ಹಾಗಿದ್ದಲ್ಲಿ ಲಭ್ಯವಿರುವ ಸ್ಥಳವನ್ನು ಗುರುತಿಸಲಾಗಿದೆಯೆ? ಹಾಗಿದ್ದಲ್ಲಿ ಎಂದಿನಿಂದ ನಿರ್ಮಾಣ ಕೆಲಸ ಪ್ರಾರಂಭವಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಆ) ಇಲ್ಲ.

ಅ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಉದ್ಯಾನವನ ನಿರ್ಮಿಸುವುದರ ಬಗ್ಗೆ

486 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಗಾರ್ಡನ್ ಸಲುವಾಗಿ ಕಾಯ್ದಿರಿಸಲಾದ ಜಾಗಗಳಲ್ಲಿ ಅಚ್ಚುಕಟ್ಟಾದ ಉದ್ಯಾನವನ ನಿರ್ಮಿಸುವ ವಿಚಾರ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? ಈ ಉದ್ಯಾನವನ ನಿರ್ವಹಣೆ ಕೆಲಸವನ್ನು ಖಾಸಗಿಯವರು ಮುಂದೆ ಬಂದಲ್ಲಿ ಅವರಿಗೆ ವಹಿಸಲು ಸರ್ಕಾರ ಸಿದ್ದವಿದೆಯೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ) :

ಅ) ಇದೆ.

ಆ) ಉದ್ಯಾನವನ ಹಾಗೂ ವರ್ತುಳಗಳ ಅಭಿವೃದ್ಧಿ ಹಾಗೂ ಸಂಸ್ಕರಣೆ ವ್ಯವಸ್ಥೆಯನ್ನು ಮಹಾನಗರ ಸಭೆಯು ಖಾಸಗಿ ಸಂಸ್ಥೆಗಳಿಗೆ ಸಂಯುಕ್ತ ಆಶ್ರಯದಲ್ಲಿ ಅಭಿವೃದ್ಧಿಪಡಿಸಲು ತೀರ್ಮಾನಿಸಿದ್ದು, ಈ ಬಗ್ಗೆ ಸಂಘ ಸಂಸ್ಥೆಗಳು ಮುಂದೆ ಬಂದಲ್ಲಿ ಮೂರು ವರ್ಷಗಳ ಮಟ್ಟಿಗೆ ಕೊಡಲಾಗುವುದು.

ಹುಬ್ಬಳ್ಳಿ ಮಹಾನಗರಕ್ಕೆ ಪ್ರವೇಶ ಮಾಡುವ ಸ್ಥಳದಲ್ಲಿ ಮಹಾದ್ವಾರ ನಿರ್ಮಾಣ

487 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹಾನಗರವನ್ನು ಪ್ರವೇಶ ಮಾಡುವ ಸ್ಥಳಗಳಲ್ಲಿ ಗಬ್ಬೂರು ಮತ್ತು ಅಂಚಿಟಗೇರಿ ಹತ್ತಿರ ಮಹಾದ್ವಾರಗಳನ್ನು ನಿರ್ಮಿಸುವ ವಿಚಾರ ಸರ್ಕಾರಕ್ಕೆ ಇದೆಯೆ? ಇದಲ್ಲಿ ಆ ಕುರಿತು ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಇದೆ.

ಈ ಎರಡು ಸ್ಥಳಗಳು ಕ್ರಮವಾಗಿ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳಿಗೆ ಹತ್ತಿರವಿದೆ. ಈ ಬಗ್ಗೆ ಸಂಬಂಧಿಸಿದವರೊಂದಿಗೆ ಚರ್ಚಿಸಿ ಒಪ್ಪಿಗೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದಕ್ಕಾಗಿ ನಗರಪಾಲಿಕೆಯೂ ಈ ವರ್ಷದ ಆಯವ್ಯಯದಲ್ಲಿ ರೂ. 2 ಲಕ್ಷಗಳನ್ನು ಕಾಯ್ದಿರಿಸಿದೆ.

ರಾಜ್ಯದಲ್ಲಿರುವ ಪುರಸಭೆ, ನಗರಸಭೆ ಮಹಾನಗರಪಾಲಿಕೆ ಸಂಖ್ಯೆ

488 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪುರಸಭೆ, ನಗರಸಭೆ ಮಹಾನಗರಪಾಲಿಕೆಗಳ ಸಂಖ್ಯೆ ಎಷ್ಟು?

ಆ) ಇತ್ತೀಚೆಗೆ ಎಷ್ಟು ಗ್ರಾಮಪಂಚಾಯತ್ ಗಳನ್ನು ಪುರಸಭೆಗಳಾಗಿ ಮಾರ್ಪಡಿಸಲಾಯಿತು? (ವಿವರ ನೀಡುವುದು)